ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಶ್ರೀ ಮಹಾಲಕ್ಷ್ಮಿ ಆರತಿ

**ಕರಾಗ್ರೇ ವಸತೇ ಲಕ್ಷ್ಮೀ ಕರಮಧ್ಯೇ ಸರಸ್ವತೀ ।**

**ಕರಮೂಲೇ ಸ್ಥಿತೇ ಗೌರೀ ಪ್ರಭಾತೇ ಕರದರ್ಶನಂ ॥**

ಪ್ರಭಾತ ಸಮಯ.

ಮುಂಬಯಿ ನಗರಿಯ ಸಂಪತ್ಕಾರಿಣಿ ಮಹಾಲಕ್ಷ್ಮೀ ದೇವಿಯ ದರ್ಶನದ ಭಾಗ್ಯ ದೊರಕುತ್ತಿರುವ ಸಂಭ್ರಮ.

ಏಳು ದ್ವೀಪಗಳ ಸಮೂಹವಾದ ಮುಂಬಯಿಯ ಏಳ್ಗೆ ಮಹಾಲಕ್ಷ್ಮಿಯ ಕೃಪೆ ಎಂಬುದು ಇಲ್ಲಿಯ ವಾಸಿಗಳ ಪ್ರಗಾಢ ನಂಬಿಕೆ. ಭೋರ್ಗರೆಯುತ್ತಿರುವ ಅರಬ್ಬೀ ಸಮುದ್ರದ ಪೂರ್ವಕ್ಕೆ ವಿಸ್ತಾರವಾಗಿ ಹರಡಿರುವ ಮುಂಬಯಿಯಲ್ಲಿ ವರ್ಗ, ಸಮುದಾಯ, ಜಾತಿ, ಮತಗಳಿಗೆ ಅತೀತವಾಗಿ ಎಲ್ಲರಿಂದಲೂ ಆರಾಧಿಸಲ್ಪಡುತ್ತಿರುವ ಸೌಭಾಗ್ಯ ದೇವತೆ **ಶ್ರೀ ಮಹಾಲಕ್ಷ್ಮಿ.** ಕರುಣೆಯ ಕಡಲಾಗಿ, ವಾತ್ಸಲ್ಯದ ಸೊಡರಾಗಿ, ಮಹಾ-ಅಂಬ-ಆಯಿ ಮುಂಬಯಿಯ ವಾಸ್ತವ್ಯರನ್ನು, ಅಲ್ಲ ಅಲ್ಲ, ವಿಶ್ವವ್ಯಾಪಿಯಾಗಿ ನೆಲೆಸಿರುವ ಭಕ್ತರನ್ನು ತನ್ನ ಮಡಿಲಿನಲ್ಲಿ ಪ್ರೀತಿಯಿಂದ ಸಲಹುತ್ತಿರುವ ಮಹಾ ಮಾತೆ ಶ್ರೀ ಮಹಾಲಕ್ಷ್ಮಿ. ಅರಬ್ಬೀ ಸಮುದ್ರದ ಉದ್ದಕ್ಕೂ ವಿಸ್ತರಿಸಿರುವ, ಮುಂಬಯಿಯ ಎತ್ತರದ ಕಟ್ಟಡಗಳು, ಮೆರೀನ್ ಡ್ರೈವ್, ವಿಕ್ಟೋರಿಯಾ ಟರ್ಮಿನಸ್, ಮುಕೇಶ್ ಅಂಬಾನೀ ಯವರ, ಲತಾ ಮಂಗೇಶ್ಕರ್ ಅವರ ಬಂಗಲೆಗಳು ಮುಂತಾದ ತಾಣಗಳ ಮೂಲಕ ಹಾದು ಹೋಗುತ್ತಿರುವ ಮುಂಬಯಿಯ ಹೆದ್ದಾರಿ. ಟಾಕ್ಸೀ ನಿಂತ ಜಾಗದಿಂದ ಸುಮಾರು ನೂರು ಮೀಟರ್ ಗಳಷ್ಟು ಸಣ್ಣ ದಾರಿ. ದಾರಿಯ ಎರಡೂ ಕಡೆಗಳಲ್ಲಿಯೂ ಪುಟ್ಟ ಪುಟ್ಟ ಮಳಿಗೆಗಳು. ಎಲ್ಲೆಲ್ಲೂ ತಾವರೆ ಹೂವು, ಗುಲಾಬಿ, ಮಲ್ಲಿಗೆ, ರಂಗು ರಂಗಿನ ಹೂವುಗಳೂ, ಹೂ ಮಾಲೆಗಳೂ, ತಾಯಿಯ ಸಮರ್ಪಣೆಗೆ ಮೀಸಲಾಗಿರುವ ಸೀರೆಗಳೂ, ಬಳೆಗಳೂ, ಅರಿಶಿನ, ಕುಂಕುಮ ಮುಂತಾದ ಮಂಗಳ ದ್ರವ್ಯಗಳೂ, ಸುಗಂಧ ಭರಿತ ಧೂಪಗಳೂ, ಊದುಬತ್ತಿಗಳೂ, ದೇವರ ನೈವೇದ್ಯಕ್ಕಾಗಿ ಸಿಹಿ ತಿಂಡಿಗಳೂ, ಹಾಗೂ ದೇವರ ಮೂರ್ತಿಗಳೂ, ಛಾಯಾಚಿತ್ರಗಳಿಂದ ಕಂಗೊಳಿಸುತ್ತಿರುವ ರಮಣೀಯ ವಾತಾವರಣ. ಸ್ವಲ್ಪ ಮೆಟ್ಟಿಲುಗಳನ್ನು ಹತ್ತಿದ ನಂತರ ದೇವಾಲಯದ ಪ್ರಾಕಾರ. ಧ್ವಜಸ್ತಂಭ ಮತ್ತು ಕಲ್ಲಿನಲ್ಲಿ ಕೆತ್ತಿರುವ ದೀಪಸ್ತಂಭ. ದೇವಾಲಯದ ಸಭಾ ಮಂಟಪದಲ್ಲಿ ಗರ್ಭಗುಡಿಯ ಎದುರಿಗೆ ದೇವರ ಆರತಿಯ ದಿವ್ಯ ದರ್ಶನಕ್ಕಾಗಿ ಕಾಯುತ್ತಿರುವ ಭಕ್ತರ ಸಾಲು. ಕೆಲವರು ಸ್ತೋತ್ರ ಪಠಣ ಮತ್ತು ಕೆಲವರು ಜಪ ಹೀಗೇ ನಾನಾ ವಿಧಗಳಲ್ಲಿ ದೇವಿಯನ್ನು ಸುಪ್ರೀತ ಗೊಳಿಸುತ್ತಿರುವ ಭಕ್ತರ ಸಂದೋಹ. ಗರ್ಭಗುಡಿಯ ಹೊರಗೆ ಸಿಂಹವಾಹಿನಿಯ ದೊಡ್ಡ ಸಿಂಹ, ಬೆಳ್ಳಿಯ ಕವಚದೊಂದಿಗೆ. ಗರ್ಭಗುಡಿಯ ಹೊರಗಿನ ಎರಡೂ ಬದಿಗಳಲ್ಲಿ

ಪುಟ್ಟ ಪುಟ್ಟ ಮಂಟಪಗಳಲ್ಲಿ ವಿರಾಜಮಾನರಾಗಿರುವ ಶ್ರೀಗಣೇಶ ಮತ್ತು ರುಕ್ಮಿಣೀ ವಿಠ್ಠಲ. ಗರ್ಭಗುಡಿಯ ಬಾಗಿಲು ತೆರೆಯುತ್ತಿದ್ದಂತೆಯೇ ಧಗ ಧಗ ಧಗ ಹೊಳೆಯುತ್ತಿರುವ ಮಹಾಲಕ್ಷ್ಮಿಯ ದರ್ಶನ, ಮಹಾಕಾಳಿ ಮತ್ತು ಮಹಾಸರಸ್ವತಿಯರೊಂದಿಗೆ. ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಸ್ವರೂಪಿಣಿ. ಸಾಕ್ಷಾತ್ ದುರ್ಗಾ ಸಪ್ತಶತಿಯಲ್ಲಿರುವಂತೆ ಬ್ರಹ್ಮಾಂಡದಲ್ಲಿನ ಸಮಸ್ತ ಚರಾಚರರನ್ನು ನಿರ್ವಹಿಸುತ್ತಿರುವ ಕೇಂದ್ರೀಯ ಶಕ್ತಿ. ಸೃಷ್ಟಿ, ಸ್ಥಿತಿ, ಲಯಗಳ ನಿಯಂತ್ರಣ ಮೂಲ. ಸರ್ವಕಾಲ, ಸರ್ವಾವಸ್ಥೆಗಳಲ್ಲೂ ಬೆಂಗಾವಲಾಗಿ ನಿಂತಿರುವ ದೈವಿಕ ಬಲ. ಅರಬ್ಬೀ ಸಮುದ್ರದ ದಂಡೆಯಲ್ಲಿ ಸಣ್ಣ ಗುಡ್ಡದ ಮೇಲೆ ಮಹಾಕಾಳಿಯಾಗಿ, ಮಹಾಲಕ್ಷ್ಮಿಯಾಗಿ, ಮಹಾಸರಸ್ವತಿಯಾಗಿ, ನಂಬಿ ಬಂದ ಭಕ್ತರನ್ನು ಕಾಯುತ್ತಿರುವ ಆದ್ಯಾಶಕ್ತಿಯಾಗಿ ಪ್ರತ್ಯಕ್ಷ, ಮಾನವ ಕಲ್ಪನೆಗೂ ಮೀರಿ ಪವಾಡ ಸದೃಶ ರೀತಿಯಲ್ಲಿ ಸುಮಾರು ಎರಡೂವರೆ ಶತಮಾನಗಳ ಹಿಂದೆ, ಶ್ರೀರಾಮ್ ಜಿ - ಶಿವ್ ಜಿ ಪ್ರಭುರವರಿಗೆ ಸ್ವಪ್ನದಲ್ಲಿ ದರ್ಶನವಿತ್ತು ಅವರು ಮಾಡುತ್ತಿದ್ದ ದ್ವೀಪಗಳ ನಡುವಿನ ಮಾರ್ಗಗಳ ನಿರ್ಮಾಣದ ಸತತ ಅಡಚಣೆಯ ಪರಿಹಾರವನ್ನು ಸೂಚಿಸಿದ ದಿವ್ಯಶಕ್ತಿ. ದುರ್ಗಾ ಸಪ್ತಶತಿಯ ಮೂರು ಚರಿತ್ರೆಗಳಲ್ಲಿರುವ, ಪ್ರಥಮ ಚರಿತ್ರೆಯ ಮಹಾಕಾಳಿ, ಮಧ್ಯಮ ಚರಿತ್ರೆಯ ಮಹಾಲಕ್ಷ್ಮಿ, ಉತ್ತಮ ಚರಿತ್ರೆಯ ಮಹಾಸರಸ್ವತಿಯ ವಿಶಿಷ್ಟ ಸನ್ನಿಧಾನ. ದುಷ್ಟ ಶಕ್ತಿಗಳ ನಾಶ ಮತ್ತು ಶಾಂತಿ ಸುಭದ್ರತೆಯ ಪುನಸ್ಥಾಪನೆಯ ಸಂದೇಶವನ್ನೊಳಗೊಂಡ ದುರ್ಗಾ ಸಪ್ತಶತಿ ಬಿಂಬಿಸುವ ಶ್ರೀಮಾತೆಯ ಅಂತರ್ಯಾಮಿ ರೂಪದ ಅಂತಃಸತ್ತ್ವದ ಮಹೋನ್ನತ ದರ್ಶನ.

**ಕಾಲಾಭ್ರಾಭಾಂ ಕಟಾಕ್ಷೈಃ ಅರಿಕುಲಭಯದಾಂ ಮೌಲಿ ಬದ್ಧೇಂದು ರೇಖಾಂ,**
**ಶಂಖಂ ಚಕ್ರಂ ಕೃಪಾಣಂ ತ್ರಿಶಿಖಮಪಿಕರೈರುದ್ವಹಂತಿಂ ತ್ರಿನೇತ್ರಾಮ್ ।**
**ಸಿಂಹ ಸ್ಕಂಧಾಧಿರೂಢಾಂ ತ್ರಿಭುವನಮಖಿಲಂ ತೇಜಸಾಪೂರಯಂತೀಂ,**
**ಧ್ಯಾಯೇದ್ದುರ್ಗಾಂ ಜಯಾಖ್ಯಾಂ ತ್ರಿದಶಪರಿವೃತಾಂ ಸೇವಿತಾಂ ಸಿದ್ಧಕಾಮೈಃ ॥**

ದುರ್ಲಭಾ, ದುರ್ಗಮಾ, ದುಷ್ಟದೂರಾ, ದುರಾಚಾರಶಮನೀ, ದೋಷವರ್ಜಿತಾ, ದುರಿತನಾಶಿನೀ, ದುಃಖಹಂತ್ರೀ, ದುಷ್ಕೃತಿಹರಾ, ದುಸ್ಸ್ವಪ್ನನಾಶಿನೀ, ದುರ್ಗತಿಹರಾ, ದುರ್ಗೆಯ ಅನಂತಾನಂತ ಲೀಲೆಗಳ ರಮಣೀಯ ವರ್ಣನೆ ದುರ್ಗಾ ಸಪ್ತಶತಿಯಲ್ಲಿ.

**ದುರ್ಗೇ ಸ್ಮೃತಾ ಹರಸಿ ಭೀತಿಮಶೇಷ ಜಂತೋಃ**
**ಸ್ವಸ್ಥೈಃ ಸ್ಮೃತಾ ಮತಿಮತೀವ ಶುಭಾಂ ದದಾಸಿ ।**
**ದಾರಿದ್ರ್ಯ ದುಃಖಭಯಹಾರಿಣಿ ಕಾ ತ್ವದನ್ಯಾ**
**ಸರ್ವೋಪಕಾರಕರಣಾಯ ಸದಾರ್ದ್ರಚಿತ್ತಾ ॥**

ಆಧ್ಯಾತ್ಮಿಕ, ಆದಿಭೌತಿಕ, ಆದಿದೈವಿಕಗಳೆಂಬ ತ್ರಿತಾಪಗಳನ್ನು ಹೋಗಲಾಡಿಸಲು ತಾಮಸಿಕ ಮಹಾಕಾಳೀ, ಸಾತ್ವಿಕ ಮಹಾಲಕ್ಷ್ಮೀ ಮತ್ತು ರಾಜಸಿಕ ಮಹಾಸರಸ್ವತಿಯ ಅವತಾರಗಳಲ್ಲಿ ಆವಿರ್ಭವಿಸಿ ಸರ್ವಾರ್ಥ ಸಾಧಕಿಯಾದ ತ್ರಿವಿಧಾ.

**ಓಂ ಐಂ ಹ್ರೀಂ ಕ್ಲೀಂ ತ್ರಿವಿಧಾಯೈ ನಮಃ .**

ಜಯಂತೀ, ಮಂಗಳಾ, ಕಾಳೀ, ಭದ್ರಕಾಳೀ, ಕಪಾಲಿನೀ, ದುರ್ಗಾ, ಕ್ಷಮಾ, ಶಿವಾ, ಧಾತ್ರೀ, ಸ್ವಾಧಾ, ಸ್ವಧಾ ಇತ್ಯಾದಿ ನಾಮಗಳಿಂದ ಸಂಪೂಜಿತಳಾದ ಜಗದೋದ್ಧಾರಿಣಿ, ಬ್ರಹ್ಮನಿಂದ ಸ್ತುತ್ಯಗೊಂಡು ಮಹಾಮಾಯೆಯಾಗಿ ವ್ಯಕ್ತಳಾಗಿ, ಕಾಲರಾತ್ರಿ, ಮೋಹರಾತ್ರಿ, ಮಹಾರಾತ್ರಿ ಎಂಬ ತ್ರಿಗುಣ ರೂಪಗಳನ್ನು ಪ್ರಕಟಿಸಿ, ಮಧುಕೈಟಭರನ್ನು ತನ್ನ ಮೋಹ ಬಂಧನಕ್ಕೆ ಸಿಲುಕಿಸಿ, ಶ್ರೀಮಹಾವಿಷ್ಣುವಿನಿಂದ ಹತರಾಗುವಂತೆ ಮಾಡಿದ ಮಹಾಕಾಳಿ, **ಓಂ ಐಂ ಮಹಾಕಾಳ್ಯೈ ನಮಃ ।**

**ಓಂ ಖಡ್ಗಂ ಚಕ್ರಗದೇಷುಚಾಪಪರಿಘಾನ್ ಶೂಲಂ ಭುಶುಂಡೀಂ ಶಿರಃ**
**ಶಂಖಂ ಸಂಧದತೀಂ ಕರೈಸ್ತ್ರಿನಯನಾಂ ಸರ್ವಾಂಗಭೂಷಾವೃತಾಮ್ ।**
**ಯಾಂ ಹಂತುಂ ಮಧುಕೈಟಭೌ ಜಲಜಭೂಸ್ತುಷ್ಟಾವ ಸುಪ್ತೇ ಹರೌ,**
**ನೀಲಾಶ್ಮದ್ಯುತಿಮಾಸ್ಯಪಾದದಶಕಾಂ ಸೇವೇ ಮಹಾಕಾಳಿಕಾಂ ॥**

ಚೈತನ್ಯ, ಬುದ್ಧಿ, ನಿದ್ರಾ, ಕ್ಷುಧಾ, ಛಾಯಾ, ಶಕ್ತಿ, ಕ್ಷಾಂತಿ, ಜಾತಿ, ಲಜ್ಜಾ, ಶಾಂತಿ, ಶ್ರದ್ಧಾ, ಕಾಂತಿ, ವೃತ್ತಿ, ಸ್ಮೃತಿ, ದಯಾ, ತುಷ್ಟಿ, ಭ್ರಾಂತಿ, ಹೀಗೆ ಇಂದ್ರಿಯಗಳ ಹಾಗೂ ಪಂಚಭೂತಗಳ ಅಧಿಷ್ಠಾತ್ರಿಯಾದಂತಹ,

**ಇಂದ್ರಿಯಾಣಾಮಧಿಷ್ಠಾತ್ರೀ ಭೂತಾನಾಂ ಚಾಖಿಲೇಷುಯಾ ।**
**ಭೂತೇಷು ಸತತಂ ತಸ್ಮೈ ವ್ಯಾಪ್ತಿ ದೇವ್ಯೈ ನಮೋನಮಃ ।**
**ಚಿತಿರೂಪೇಣ ಯಾ ಕೃತ್ಸ್ನಂ ಏತದ್ ವ್ಯಾಪ್ಯ ಸ್ಥಿತಾ ಜಗತ್ ॥**

ಎಲ್ಲೆಲ್ಲೂ ನೆಲೆಸಿರುವ ಲಕ್ಷಣ ಶಕ್ತಿ ಮಹಾಲಕ್ಷ್ಮಿ. ತನ್ನ ಚಿದ್ರೂಪದಿಂದ ಜಗದ್ವ್ಯಾಪಿಯಾಗಿರುವ ವಿಷ್ಣುಮಾಯೆ. ಬ್ರಹ್ಮ, ವಿಷ್ಣು, ಮಹೇಶ್ವರ ಹಾಗೂ ಸಕಲ ದೇವತೆಗಳಿಂದ ಹೊರಹೊಮ್ಮಿದ ತೇಜೋರಾಶಿ. ಸಾಕ್ಷಾತ್ ಪರಶಿವನ ತೇಜಸ್ಸು ಮುಖವಾಗಿ, ಯಮನ ತೇಜ ಕೇಶೋವೃಂದವಾಗಿ, ಸಂಧ್ಯಾಭಿಮಾನಿ ದೇವತೆಗಳ ತೇಜಸ್ಸು ಹುಬ್ಬುಗಳಾಗಿ, ಅಗ್ನಿಯ ಪ್ರಕಾಶಮಯ ಪ್ರಭೆ ತ್ರಿನೇತ್ರಗಳಾಗಿ, ಕುಬೇರನ ಪ್ರಕೃಷ್ಟ ಪ್ರಭೆ ನಾಸಿಕೆಯಾಗಿ, ವಾಯುವಿನ ತೇಜಸ್ಸು ಕರ್ಣಗಳಾಗಿ, ಪ್ರಜಾಪತಿಯ ತೇಜಸ್ಸು ದಂತ ಪಂಕ್ತಿಯಾಗಿ, ವಿಷ್ಣುವಿನ ತೇಜಸ್ಸು ಬಾಹುಗಳಾಗಿ, ವಸುಗಳ ತೇಜಸ್ಸು ಕೈ ಬೆರಳುಗಳಾಗಿ, ಚಂದ್ರನ ತೇಜಸ್ಸು ಸ್ತನಗಳಾಗಿ, ಮಹೇಂದ್ರನ ತೇಜಸ್ಸು ನಡುವಾಗಿ, ವರುಣನ ಪ್ರಭೆ ಊರು ಮತ್ತು ಮೊಣಕಾಲುಗಳಾಗಿ,

ಭೂದೇವಿಯ ತೇಜ ನಿತಂಬಗಳಾಗಿ, ಬ್ರಹ್ಮನ ತೇಜಸ್ಸು ಪಾದಗಳಾಗಿ, ರವಿಯ ತೇಜಸ್ಸು ಕಾಲ್ಬೆರಳುಗಳಾಗಿ, ಸಾಕ್ಷಾತ್ಕರಿಸಿದ ಮಹಾದ್ಭುತ ರೂಪ ಮಹಾಲಕ್ಷ್ಮಿ.

**ಓಂ ಅಕ್ಷಸ್ರಕ್ಪರಶುಂ ಗದೇಶುಕುಲಿಶಂ ಪದ್ಮಂ ಧನುಃ ಕುಂಡಿಕಾಂ,**

**ದಂಡಂ ಶಕ್ತಿಮುಸಿಂ ಚ ಚರ್ಮ ಜಲಜಂ ಘಂಟಾಂ ಸುರಾಭಾಜನಮ್ ।**

**ಶೂಲಂ ಪಾಶ ಸುದರ್ಶನೇ ಚ ದಧತೀಂ ಹಸ್ತೈಃ ಪ್ರವಾಲಪ್ರಭಾಂ,**

**ಸೇವೇ ಸೈರಿಭಮರ್ದಿನೀಮಿಹ ಮಹಾಲಕ್ಷ್ಮೀಂ ಸರೋಜಸ್ಥಿತಾಮ್ ॥**

ಕ್ಷೀರಸಾಗರನಿಂದ ಹಾರ, ವಸ್ತ್ರ, ಚೂಡಾಮಣಿ, ಕುಂಡಲ, ಕಡಗ; ಚಂದ್ರಕಲೆಯಿಂದ ಕಂಠ, ಕೇಯೂರಾಭರಣಗಳು, ರತ್ನದ ಉಂಗುರಗಳು; ಸಮುದ್ರ ದೇವರಿಂದ ಕಮಲದ ಹಾರ; ಆದಿಶೇಷನಿಂದ ನಾಗಹಾರ, ಬ್ರಹ್ಮನಿಂದ ಅಕ್ಷರಮಾಲೆ, ಕಮಂಡಲು ಹೀಗೆ ದಿವ್ಯಾಭರಣಗಳಿಂದ ಸಾಲಂಕೃತಳಾದ ಆದಿಶಕ್ತಿ. ಪರಶಿವನಿಂದ ಶೂಲ, ಶ್ರೀಹರಿಯಿಂದ ಚಕ್ರ, ವರುಣನಿಂದ ಶಂಖ ಘಂಟೆ, ಅಗ್ನಿಯಿಂದ ಶಕ್ತ್ಯಾಯುಧ, ವಾಯುವುನಿಂದ ಧನಸ್ಸು ಬತ್ತಳಿಕೆ, ಇಂದ್ರನಿಂದ ವಜ್ರಾಯುಧ, ಯಮನಿಂದ ದಂಡಾಯುಧ, ಜಲಾಧಿದೇವತೆಯಿಂದ ಪಾಶಾಯುಧ, ಕಾಲದೇವನಿಂದ ಖಡ್ಗ ಗುರಾಣಿ, ವಿಶ್ವಕರ್ಮನಿಂದ ಪರಶು ಪಡೆದು, ನಾವು ಭಕ್ತಿಯಿಂದ ಪ್ರೀತಿಯಿಂದ ಕರೆದಾಗ ಬಂದು ನಮ್ಮ ಕಷ್ಟ ಕಾರ್ಪಣ್ಯಗಳನ್ನು ನಿರ್ಮೂಲಗೊಳಿಸುವ ಮಹಾಲಕ್ಷ್ಮಿ.

**ಕೇನೋಪಮಾ ಭವತು ತೇಸ್ಯ ಪರಾಕ್ರಮಸ್ಯ**

**ರೂಪಂ ಚ ಶತ್ರುಭಯಕಾರ್ಯತಿಹಾರಿಕುತ್ರ ।**

**ಚಿತ್ತೇ ಕೃಪಾ ಸಮರ ನಿಷ್ಠುರತಾ ಚ ದೃಷ್ಟಾ**

**ತ್ವಯ್ಯೇವ ದೇವಿ ವರದೇ ಭುವನತ್ರಯೇಪಿ ॥**

**ಅತಿಸೌಮ್ಯಾತಿರೌದ್ರಾಯೈ ನತಾಸ್ತಸ್ಯೈ ನಮೋ ನಮಃ ।**

ಹೃದಯದಲ್ಲಿ ಅನುಕಂಪ, ಕದನದಲ್ಲಿ ನಿಷ್ಠುರತೆ, ಏಕಕಾಲದಲ್ಲಿ ಮೆರೆದ ಸಂಗಮ ಬಿಂದು ಅಖಿಲಾಂಡೇಶ್ವರಿ. ಸಿಂಹಾರೂಢಳಾಗಿ ಸರ್ವಾಯುಧಧರಳಾದ ಜಯದುರ್ಗೆ, ದುಷ್ಟಜನ ಸಂಹಾರಿಣಿ, ಶಿಷ್ಟಜನ ಪರಿಪಾಲಿನಿ. ದುಃಖ ದಾರಿದ್ರ್ಯ ದುರಿತ ನಿವಾರಿಣಿ, ಸೌಭಾಗ್ಯ ಸಂಪತ್ಕರಿ ಮಹಾಲಕ್ಷ್ಮಿ, **ಓಂ ಹ್ರೀಂ ಮಹಾಲಕ್ಷ್ಮ್ಯೈ ನಮಃ ।**

**ಸರಸ್ವತೀ ಶಾಸ್ತ್ರಮಯೀ ಗುಹಾಂಬಾ ಗುಹ್ಯರೂಪಿಣೀ ।**

ಹುಂಕಾರದಿಂದ ಧೂಮ್ರಲೋಚನನನ್ನು ಭಸ್ಮಗೊಳಿಸಿ, ಚಂಡ ಮುಂಡರನ್ನು ಸಂಹರಿಸಿ, ರಕ್ತಬೀಜಾಸುರನನ್ನು ಧರೆಗೆ ಉರುಳಿಸಿದ ದೇವಿ. ದೈತ್ಯರನ್ನು ನಾಶಮಾಡಿದಂತೆ ನಮ್ಮ ಶತ್ರುಗಳನ್ನು ಸಹ

ನಾಶಮಾಡಿ ರಕ್ಷಿಸುವ ಮಾತೆ ಮಹಾಸರಸ್ವತಿ. ಪರಮೋತ್ಕೃಷ್ಟ ಮೇಧಾ ಸಂಪನ್ನೆ, ಅಪ್ರತಿಮ ಸೌಂದರ್ಯರಾಶಿ, ಕೌಶಿಕೀ ಕಾಲಿಕಾ ಖ್ಯಾತಿಯ ಹಿಮಾಚಲವಾಸಿನಿ ಲೋಕೇಶ್ವರಿಯನ್ನು ಪಡೆಯಬೇಕೆಂಬ ದುರಾಸೆಯಿಂದ ಮದೋನ್ಮತ್ತರಾಗಿ ವಿಜೃಂಭಿಸುತ್ತಿರುವ ಮಹಾ ದೈತ್ಯರಾದ ಶುಂಭನನ್ನು ಸಂಹರಿಸಿ, ನಿಶುಂಭನನ್ನು ಮರ್ದಿಸಿದ ಚಂಡಿಕೆಯೇ ಸಾಕ್ಷಾತ್, ಕ್ಲೀಂಕಾರೀ ಕೇವಲಾ ಗುಹ್ಯಾ ಕೈವಲ್ಯಪದದಾಯಿನೀ, ಮಹಾಸರಸ್ವತಿ.

**ಓಂ ಘಂಟಾಶೂಲಹಲಾನಿ ಶಂಖಮುಸಲೇ ಚಕ್ರಂ ಧನುಃ ಸಾಯಕಂ,**

**ಹಸ್ತಾಬ್ಜೈರ್ದಧತೀಂ ಘನಾಂತವಿಲಸಚ್ಛೀತಾಂಶುತುಲ್ಯ ಪ್ರಭಾಮ್ ।**

**ಗೌರೀ ದೇಹಸಮುದ್ಭವಾಂ ತ್ರಿಜಗತಾಮಾಧಾರಭೂತಾಂ ಮಹಾಪೂರ್ವಾಮತ್ರ**

**ಸರಸ್ವತೀಮನುಭಜೇ ಶುಂಭಾದಿ ದೈತ್ಯಾರ್ದಿನೀಮ್ ॥**

**ಓಂ ಕ್ಲೀಂ ಮಹಾಸರಸ್ವತ್ಯೈ ನಮಃ ।**

ಗರ್ಭಗುಡಿಯ ಮುಂದೆ ಮಹಾಲಕ್ಷ್ಮಿಯ ಆರತಿಗಾಗಿ ಕುಳಿತಾಗ, ಭಕ್ತರ ಸ್ತೋತ್ರ, ಜಪ, ಪ್ರಾರ್ಥನೆಗಳಿಂದ ತುಂಬಿರುವ ಪ್ರಾಂಗಣ, ಕಲ್ಪವೃಕ್ಷಗಳಿಂದ ಆವೃತವಾದ ಚಿಂತಾಮಣಿಗೃಹದಂತೆ ಭಾಸ. ತ್ರೈಲೋಕ್ಯಮೋಹನ ಚಕ್ರ, ಸರ್ವಶಾಪರಿಪೂರಕ ಚಕ್ರ, ಸರ್ವ ಸಂಕ್ಷೋಭಣಾ ಚಕ್ರ, ಸರ್ವ ಸೌಭಾಗ್ಯದಾಯಕ ಚಕ್ರ, ಸರ್ವಾರ್ಥಸಾಧಕ ಚಕ್ರ, ಸರ್ವರಕ್ಷಾಕರ ಚಕ್ರ, ಸರ್ವರೋಗಹರ ಚಕ್ರ, ಸರ್ವಸಿದ್ಧಿಪ್ರದಾ ಚಕ್ರಗಳೆಂಬ ಆವರಣಗಳನ್ನು ಕ್ರಮಿಸಿ, ಸರ್ವಾನಂದಮಯ ಚಕ್ರದಲ್ಲಿ ಪ್ರವೇಶಿಸಿದ ದಿವ್ಯಾನುಭವ. ವಾಕ್ಕಿಗೂ ಮನಸ್ಸಿಗೂ ಎಟುಕದ ಪರಾಪರರಹಸ್ಯಯೋಗಿನೀ ಇಲ್ಲಿ ತ್ರಿವಿಧಳಾಗಿ ಸಾಕ್ಷಾತ್ಕಾರ.

**ಕಿಂ ವರ್ಣಯಾಮ ತವ ರೂಪಮಚಿಂತ್ಯಮೇತತ್**,

**ಈಶತ್ಸಹಾಸಮಮಲಂ ಪರಿಪೂರ್ಣಚಂದ್ರಬಿಂಬಾನುಕಾರಿ**

**ಕನಕೋತ್ತಮಕಾಂತಿಕಾಂತಮ್ ॥**

ಮಾತೆಯರ ಪ್ರಜ್ವಲಿಸುತ್ತಿರುವ ಕಿರೀಟಗಳು, ತೇಜೋಮಯವಾದ ಮುಖಗಳಲ್ಲಿ ಶೋಭಿಸುತ್ತಿರುವ ಸಿಂಧೂರ, ಕರುಣಾಪೂರ್ಣ ದೃಷ್ಟಿ ಬೀರುತ್ತಿರುವ ಅವರ ನೇತ್ರಗಳು, ನೀಳ ನಾಸಿಕ, ಫಳ ಫಳ ಹೊಳೆಯುತ್ತಿರುವ ಮೂಗುತಿಗಳು, ಸ್ನಿಗ್ಧ ಮಂದಹಾಸ ಬೀರುತ್ತಾ ನಮಗೆ ಆಶೀರ್ವಾದ ಮಾಡುತ್ತಿರುವ ಅಧರಗಳು, ಚತುರ್ಬಾಹುಗಳಲ್ಲಿರುವ ಸುವರ್ಣ ಕಂಕಣಗಳು, ಎದೆಯ ಮೇಲೆ ವಿರಾಜಿಸುತ್ತಿರುವ ರಂಗು ರಂಗಿನ ದೊಡ್ಡ ದೊಡ್ಡ ಹಾರಗಳು, ಓಡ್ಯಾಣ ಪೀತಾಂಬರಗಳಿಂದ ಅಲಂಕೃತವಾದ ದಿವ್ಯ ಭವ್ಯ ಸುಂದರ ಮೂರ್ತಿಗಳು.

**ಓಂ ಐಂ ಹ್ರೀಂ ಶ್ರೀಂ ಓಡ್ಯಾಣಪೀಠನಿಲಯಾ ಬಿಂದುಮಂಡಲವಾಸಿನ್ಯೈ ನಮೋ ನಮಃ ।**

ಅರ್ಚಕರ ಷೋಡಶೋಪಚಾರ ಪೂಜೆಯನ್ನು ಸ್ವೀಕರಿಸುತ್ತಾ ಸಂತಸದಿಂದ ನೆರೆದಿರುವ ಭಕ್ತರನ್ನೆಲ್ಲಾ ಅಶೀರ್ವದಿಸುತ್ತಿರುವ ಮಾತೆಯರು. ಧೂಪದ ಘಮ ಘಮ, ಹೂವುಗಳ ಸುಗಂಧ, ಘಂಟಾನಾದ, ಶಂಖಾರವದೊಂದಿಗೆ ಪ್ರಾರಂಭವಾದ ಆರತಿ.

## ಶ್ರೀ ಆದಿಶಕ್ತಿ ಜೀ ಕೀ ಆರತಿ

ಜೈ ಆದ್ಯಾ ಶಕ್ತಿ, ಮಾ ಜೈ ಆದ್ಯಾ ಶಕ್ತಿ,
ಅಖಂಡ ಬ್ರಹ್ಮಾಂಡ ನಿಪಾವ್ಯ, ಅಖಂಡ ಬ್ರಹ್ಮಾಂಡ ನಿಪಾವ್ಯ,
ಪಡವೆ ಪಂಡಿತ ಮಾ, ಓಂ ಜಯೋ ಜಯೋ ಮಾ ಜಗದಂಬೆ.
ದ್ವಿತೀಯ ಬೆ ಸ್ವರೂಪ, ಶಿವ ಶಕ್ತಿ ಜಾನು, ಮಾ ಶಿವ ಶಕ್ತಿ ಜಾನು,
ಬ್ರಹ್ಮ ಗಣಪತಿ ಗಾಯೆ, ಬ್ರಹ್ಮ ಗಣಪತಿ ಗಾಯೆ,
ಹರ್ ಗಾಯೆ ಹರ ಮಾ, ಓಂ ಜಯೋ ಜಯೋ ಮಾ ಜಗದಂಬೆ.
ತೃತೀಯ ತ್ರಣ ಸ್ವರೂಪ, ತ್ರಿಭುವನ ಮಾ ಬೇಠಾ, ಮಾ ತ್ರಿಭುವನ ಮಾ ಬೇಠಾ,
ತ್ರಯಾ ತ್ರಾಕಿ ತರವೇಣಿ, ತ್ರಯಾ ತ್ರಾಕಿ ತರವೇಣಿ,
ತು ತರವೇಣೀ ಮಾ, ಓಂ ಜಯೋ ಜಯೋ ಮಾ ಜಗದಂಬೆ.
ಚೌತೆ ಚತುರ ಮಹಾಲಕ್ಷ್ಮಿ, ಮಾ ಸಚರಚರಾ ವ್ಯಾಪಾ, ಮಾ ಸಚರಚರಾ ವ್ಯಾಪಾ,
ಚಾರ್ ಭುಜಾ ಚೋ ದಿಶಾ, ಚಾರ್ ಭುಜಾ ಚೋ ದಿಶಾ,
ಪ್ರಕಟ್ಯಾ  ದಕ್ಷಿಣ ಮಾ, ಓಂ ಜಯೋ ಜಯೋ ಮಾ ಜಗದಂಬೆ.
ಪಂಚಮೆ ಪಂಚ ಋಷಿ, ಪಂಚಮಿ ಗುಣಪದ್ಮ, ಮಾ ಪಂಚಮಿ ಗುಣಪದ್ಮ,
ಪಂಚ  ತ್ಯಾ ಸೊಹಿಯೇ, ಪಂಚ ತ್ಯಾ ಸೊಹಿಯೇ,
ಪಂಚ ತತ್ವೋ ಮಾ, ಓಂ ಜಯೋ ಜಯೋ ಮಾ ಜಗದಂಬೆ.
ಷಷ್ಟಿ ತು ನಾರಾಯಣಿ, ಮಹಿಷಾಸುರ ಮಾರ್ಯೋ, ಮಾ ಮಹಿಷಾಸುರ ಮಾರ್ಯೋ,
ನರನಾರೀ ನ ರೂಪೆ, ನರನಾರೀ ನ ರೂಪೆ, ವ್ಯಾಪ್ಯಾ ಸಗಡೀ ಮಾ,
ಓಂ ಜಯೋ ಜಯೋ ಮಾ ಜಗದಂಬೆ.
ಸಪ್ತಮಿ ಸಪ್ತ ಪಾತಾಳ, ಸಾವಿತ್ರೀ ಸಂಧ್ಯಾ, ಮಾ ಸಾವಿತ್ರೀ ಸಂಧ್ಯಾ,
ಗೌ ಗಂಗಾ ಗಾಯತ್ರೀ, ಗೌ ಗಂಗಾ ಗಾಯತ್ರೀ,
ಗೌರೀ ಗೀತಾ ಮಾ, ಓಂ ಜಯೋ ಜಯೋ ಮಾ ಜಗದಂಬೆ.
ಅಷ್ಟಮಿ ಅಷ್ಟ ಭುಜಾವೋ, ಆಯೀ ಆನಂದಾ, ಮಾ ಆಯೀ ಆನಂದಾ,

ಸುರವರ ಮುನಿವರ ಜನ್ಮ್ಯ, ಸುರವರ ಮುನಿವರ ಜನ್ಮ್ಯ,
ದೇವ ದೈತ್ಯ್ಯೋ ಮಾ, ಓಂ ಜಯೋ ಜಯೋ ಮಾ ಜಗದಂಬೆ.
ನವಮಿ ನವಕುಲ ನಾಗ, ಸೇವೇ ನವದುರ್ಗಾ, ಮಾ ಸೇವೇ ನವದುರ್ಗಾ,
ನವರಾತ್ರಿ ನಾ ಪೂಜನ್, ಶಿವರಾತ್ರಿ ನಾ ಅರ್ಚನ್,
ಕಿಧಾ ಹರ್ ಬ್ರಹ್ಮಾ, ಓಂ ಜಯೋ ಜಯೋ ಮಾ ಜಗದಂಬೆ.
ದಶಮಿ ದಶ ಅವತಾರ, ಜೈ ವಿಜಯ ದಶಮಿ, ಮಾ ಜೈ ವಿಜಯ ದಶಮಿ,
ರಾಮೇ ರಾಮ ರಾಮಾದ್ಯಾ, ರಾಮೇ ರಾಮ ರಾಮಾದ್ಯಾ,
ರಾವಣ್ ರೂಡ್ಯೋ ಮಾ, ಓಂ ಜಯೋ ಜಯೋ ಮಾ ಜಗದಂಬೆ.
ಏಕಾದಶಿ ಆಜ್ಞಾರಸ, ಕಾತ್ಯಾಯನಿ ಕಾಮಾ, ಮಾ ಕಾತ್ಯಾಯನಿ ಕಾಮಾ,
ಕಾಮ ದುರ್ಗಾ ಕಾಳಿಕ, ಕಾಮ ದುರ್ಗಾ ಕಾಳಿಕ,
ಶ್ಯಾಮಾ ನೇ ರಾಮಾ, ಓಂ ಜಯೋ ಜಯೋ ಮಾ ಜಗದಂಬೆ.
ಬಾರಸೇ ಬಾಲಾ ರೂಪ, ಬಹುಚರಿ ಅಂಬಾ ಮಾ, ಮಾ ಬಹುಚರಿ ಅಂಬಾ ಮಾ,
ಬಟುಕ್ ಭೈರವ್ ಸೊಹಿಯೇ, ಕಾಲ್ ಭೈರವ್ ಸೊಹಿಯೇ,
ತಾರಾ ಛೇ ತುಝ್ ಮಾ, ಓಂ ಜಯೋ ಜಯೋ ಮಾ ಜಗದಂಬೆ.
ತೇರಸ್ ತುಲಜಾ ರೂಪ, ತಮೆ ತಾರುಣಿ ಮಾತಾ, ಮಾ ತಮೆ ತಾರುಣಿ ಮಾತಾ,
ಬ್ರಹ್ಮ ವಿಷ್ಣು ಸದಾಶಿವ, ಬ್ರಹ್ಮ ವಿಷ್ಣು ಸದಾಶಿವ,
ಗುಣ ತಾರಾ ಗಾತಾ, ಓಂ ಜಯೋ ಜಯೋ ಮಾ ಜಗದಂಬೆ.
ಚೌದಸೆ ಚೌಡಾ ರೂಪ, ಚಂಡೀ ಚಾಮುಂಡಾ, ಮಾ ಚಂಡೀ ಚಾಮುಂಡಾ,
ಭಾವ ಭಕ್ತಿ ಕೊಯಿ ಆಪೋ, ಚತುರಾಈ ಕೊಯಿ ಆಪೋ,
ಸಿಂಗ ವಾಹಿನಿ ಮಾತಾ, ಓಂ ಜಯೋ ಜಯೋ ಮಾ ಜಗದಂಬೆ.
ಪುನಮೆ ಕುಂಭ ಭರ್ಯೋ, ಸಾಂಬಾಲಜ ಕರುಣಾ, ಮಾ ಸಾಂಬಾಲಜ ಕರುಣಾ,
ವಸಿಷ್ಟ ದೇವ ವಾಖನ್ಯಾ, ಮಾರ್ಕಾಂಡ್ ದೇವ ವಾಖನ್ಯಾ,
ಗಾಯೀ ಶುಭ ಕವಿತಾ, ಓಂ ಜಯೋ ಜಯೋ ಮಾ ಜಗದಂಬೆ.
ಸೌವಂತಾ ಸೋಲೆ ಸತಾವನ, ಸೌಲಶೆ ಬಾವಿಶ ಮಾ, ಮಾ ಸೌಲಶೆ ಬಾವಿಶ ಮಾ,
ಸೌವಂತಾ ಸೋಲೆ ಪ್ರಗಟ್ಯಾ, ಸೌವಂತಾ ಸೋಲೆ ಪ್ರಗಟ್ಯಾ,
ರೇವಾ ನೇ ತೀರ್, ಓಂ ಜಯೋ ಜಯೋ ಮಾ ಜಗದಂಬೆ.
ತ್ರಂಬಾವತಿ ನಗರಿ, ಆಯೀ ರೂಪಾವತಿ ನಗರೀ, ಮಾ ಮಂಚಾವತೀ ನಗರೀ,

ಸೋಲ ಸಹಸ್ರ ತ್ರಾಣ್ ಸೋಹಿಯೇ, ಸೋಲ ಸಹಸ್ರ ತ್ರಾಣ್ ಸೋಹಿಯೇ,

ಕ್ಷಮಾ ಕರೋ ಗೌರೀ, ಮಾ ದಯಾ ಕರೋ ಗೌರೀ,

ಓಂ ಜಯೋ ಜಯೋ ಮಾ ಜಗದಂಬೆ.

ಶಿವ ಶಕ್ತಿ ನಿ ಆರತಿ, ಜೇ ಕೋಯೀ ಗಾಶೇ, ಮಾ ಜೇ ಭಾವೇ ಗಾಶೇ,

ಭಾನೇ ಶಿವಾನಂದ ಸ್ವಾಮಿ, ಭಾನೇ ಶಿವಾನಂದ ಸ್ವಾಮಿ,

ಸುಖ ಸಂಪತ್ತಿ ಥಾಶೇ, ಮಾ ಕೈಲಾಶೇ ಜಾಶೇ,

ಮಾ ಅಂಬಾ ದುಃಖ ಹರಶೇ, ಓಂ ಜಯೋ ಜಯೋ ಮಾ ಜಗದಂಬೆ.

ಏಕ್ ಮಾ ಏಕ ಸ್ವರೂಪ, ಅಂತರ ನವ ದರಶೋ, ಮಾ ಅಂತರ ನವ ದರಶೋ,

ಭೋಲಾ ಭೂಧರ ಭಜತಾ, ಮಹಾಲಕ್ಷ್ಮಿ ನೇ ಭಜತಾ,

ಭವ ಸಾಗರ್ ತರಶೋ, ಓಂ ಜಯೋ ಜಯೋ ಮಾ ಜಗದಂಬೆ.

ಭಾವ ನ ಜಾನೂ, ಭಕ್ತಿ ನ ಜಾನೂ,

ನವ ಜಾನೂ ಸೇವಾ, ಮಾ ನವ ಜಾನೂ ಸೇವಾ,

ವಲ್ಲಭ ಭಟ್ಟ ನೆ ಆಪಿ, ಸರ್ವ ಜಾನೇ ನೆ ಆಪಿ,

ಮಾ ಚರಣೋ ಮೀ ಸೇವಾ, ಓಂ ಜಯೋ ಜಯೋ ಮಾ ಜಗದಂಬೆ.

## ಶ್ರೀ ದುರ್ಗಾ ಜೀ ಕೀ ಆರತಿ

ಅಂಬೆ, ತೂ ಜಗದಂಬೆ ಕಾಳೀ, ಜಯ ದುರ್ಗೆ ಖಪ್ಪರ್ ವಾಲೀ,

ತೇರೇ ಹೀ ಗುಣ್ ಗಾವೆ ಭಾರತೀ, ಓ ಮಯ್ಯಾ, ಹಮ್ ಸಬ್ ಉತಾರೆ ತೇರೀ ಆರತೀ.

ತೇರೇ ಭಕ್ತಜನೋಂಪರ್ ಮಾತಾ, ಭೀರ್ ಪಢೀ ಹೈ ಭಾರೀ, ಭೀರ್ ಪಢೀ ಹೈ ಭಾರೀ,

ದಾನವ ದಳಪರ್ ಟೂಟ್ ಪಡೊ ಮಾ, ಕರ್ ಕೆ ಸಿಂಹ ಸವಾರೀ, ಕರ್ ಕೆ ಸಿಂಹ ಸವಾರೀ,

ಸೌ ಸೌ, ಸಿಂಹೊಂ ಸೆ ಬಲಶಾಲೀ, ಹೈ ಅಷ್ಟಭುಜಾವೋಂವಾಲೀ,

ದುಷ್ಟೋಂಕೊ ತೂ ಹೀ ಲಲ್ ಕಾರತೀ,

ಓ ಮಯ್ಯಾ, ಹಮ್ ಸಬ್ ಉತಾರೆ ತೇರೀ ಆರತೀ.

ಮಾ ಬೇಟೇ ಕಾ ಹೈ ಇಸ್ ಜಗ್ ಮೆ, ಬಡಾ ಹಿ ನಿರ್ಮಲ್ ನಾತಾ, ಬಡಾ ಹಿ ನಿರ್ಮಲ್ ನಾತಾ,

ಪೂತ್ ಕಪೂತ್ ಸುನೆ ಹೈ ಪರ್ ನ, ಮಾತಾ ಸುನೀ ಕುಮಾತಾ, ಮಾತಾ ಸುನೀ ಕುಮಾತಾ,

ಸಬ್ ಪೆ ಕರುಣಾ ದರ್ಶಾನೆ ವಾಲೀ, ಅಮೃತ್ ಬರಸಾನೆ ವಾಲೀ,

ದುಃಖಿಯೋಂ ಕೆ ದುಖಡೆ ನಿವಾರತೀ,

ಓ ಮಯ್ಯಾ, ಹಮ್ ಸಬ್ ಉತಾರೆ ತೇರೀ ಆರತೀ.

ನಹೀ ಮಾಂಗತೆ ಧನ್ ಔರ್ ದೌಲತ್, ನಾ ಚಾಂದೀ ನ ಸೋನಾ, ನಾ ಚಾಂದೀ ನಾ ಸೋನಾ,

ಹಮ್ ಮಾಂಗೆ ತೇರೆ ಚರಣೋಂಮೆ, ಛೋಟಾ ಸಾ ಇಕ್ ಕೋನಾ, ಛೋಟಾ ಸಾ ಇಕ್ ಕೋನಾ,

ಸಬ್ ಕೀ, ಬಿಗಡೀ ಬನಾನೆ ವಾಲೀ, ಲಾಜ್ ಬಚಾನೆ ವಾಲೀ,

ಸತಿಯೋಂಕೆ ಸತ್ ಕೊ ಸವಾರತೀ,

ಓ ಮಯ್ಯಾ, ಹಮ್ ಸಬ್ ಉತಾರೆ ತೇರೀ ಆರತೀ.

ಚರಣ ಶರಣ ಮೆ ಖಡೆ ತುಮ್ಹಾರೀ, ಲೆ ಪೂಜಾ ಕೀ ಥಾಲೀ, ಲೆ ಪೂಜಾ ಕೀ ಥಾಲೀ,

ವರದ ಹಸ್ತ ಸರ್ ಪರ್ ರಖ್ ದೊ, ಮಾ ಸಂಕಟ್ ಹರ್ ನೆ ವಾಲೀ,  ಸಂಕಟ್ ಹರ್ ನೆ ವಾಲೀ,

ಮಾ ಭರ್, ದೊ ಭಕ್ತಿ ರಸ್ ಪ್ಯಾಲೀ, ಅಷ್ಟಭುಜಾವೋಂವಾಲೀ,

ಭಕ್ತೋಂ ಕೆ ಕಾರಜ್ ತೂ ಹೀ ಸಾರತೀ,

ಓ ಮಯ್ಯಾ, ಹಮ್ ಸಬ್ ಉತಾರೆ ತೇರೀ ಆರತೀ.

ಅಂಬೆ, ತೂ ಜಗದಂಬೆ ಕಾಳೀ, ಜಯ ದುರ್ಗೆ ಖಪ್ಪರ್ ವಾಲೀ,

ತೇರೇ ಹೀ ಗುಣ್ ಗಾವೆ ಭಾರತೀ, ಓ ಮಯ್ಯಾ, ಹಮ್ ಸಬ್ ಉತಾರೆ ತೇರೀ ಆರತೀ.

## ಶ್ರೀ ಲಕ್ಷ್ಮೀ ಜೀ ಕೀ ಆರತಿ

ಓಂ ಜೈ ಲಕ್ಷ್ಮೀ ಮಾತಾ, ಮಯ್ಯಾ ಜೈ ಲಕ್ಷ್ಮೀ ಮಾತಾ,

ತುಮ್ ಕೊ ನಿಶಿದಿನ್ ಸೇವತ್, ತುಮ್ ಕೊ ನಿಶಿದಿನ್ ಸೇವತ್,

ಹರ ವಿಷ್ಣು ವಿಧಾತಾ, ಓಂ ಜೈ ಲಕ್ಷ್ಮೀ ಮಾತಾ.

ಉಮಾ, ರಮಾ, ಬ್ರಹ್ಮಾಣೀ, ತೂ ಹೀ ಜಗ್ ಮಾತಾ,

ಸೂರ್ಯ ಚಂದ್ರಮಾ ಧ್ಯಾವತ್, ಸೂರ್ಯ ಚಂದ್ರಮಾ ಧ್ಯಾವತ್,

ನಾರದ ಋಷಿ ಗಾತಾ, ಓಂ ಜೈ ಲಕ್ಷ್ಮೀ ಮಾತಾ.

ದುರ್ಗಾ ರೂಪ ನಿರಂಜನ್, ಸುಖ ಸಂಪತ್ತಿ ದಾತಾ,

ಜೋ ಕೊಯೀ ತುಮ್ ಕೊ ಧ್ಯಾವತ್, ಜೋ ಕೊಯೀ ತುಮ್ ಕೊ ಧ್ಯಾವತ್,

ಋದ್ಧಿ, ಸಿದ್ಧಿ ಪಾತಾ, ಓಂ ಜೈ ಲಕ್ಷ್ಮೀ ಮಾತಾ.

ತುಮ್ ಪಾತಾಳ ನಿವಾಸಿನಿ, ತುಮ್ ಹೀ ಶುಭ್ ದಾತಾ,

ಕರ್ಮ ಪ್ರಭಾವ ಪ್ರಕಾಶಿನಿ, ಕರ್ಮ ಪ್ರಭಾವ ಪ್ರಕಾಶಿನಿ,

ಭವನಿಧಿ ಕೀ ತ್ರಾತಾ, ಓಂ ಜೈ ಲಕ್ಷ್ಮೀ ಮಾತಾ.

ಜಿಸ್ ಘರ್ ಮೇ ತುಮ್ ರಹತೀ, ತಹ್ ಸದ್ಗುಣ್ ಆತಾ,

ಸಬ್ ಸಂಭವ್ ಹೋ ಜಾತಾ, ಸಬ್ ಸಂಭವ್ ಹೋ ಜಾತಾ,

ಮನ್ ನಹೀ ಘಬರಾತಾ, ಓಂ ಜೈ ಲಕ್ಷ್ಮೀ ಮಾತಾ.

ತುಮ್ ಬಿನ್ ಯಜ್ಞ್ ನ ಹೋತೆ, ವರತ್ ನ ಹೋ ಪಾತಾ,

ಖಾನ್ ಪಾನ್ ಕಾ ವೈಭವ್, ಖಾನ್ ಪಾನ್ ಕಾ ವೈಭವ್,

ಸಬ್ ತುಮ್ ಸೆ ಆತಾ, ಓಂ ಜೈ ಲಕ್ಷ್ಮೀ ಮಾತಾ.

ಶುಭ್ ಗುಣ ಮಂದಿರ ಸುಂದರ, ಕ್ಷೀರೋ ದಧಿ ಜಾತಾ,

ರತನ ಚತುರ್ದಶ ತುಮ್ ಬಿನ್, ರತನ ಚತುರ್ದಶ ತುಮ್ ಬಿನ್,

ಕೋಯೀ ನಹಿ ಪಾತಾ, ಓಂ ಜೈ ಲಕ್ಷ್ಮೀ ಮಾತಾ.

ಮಹಾಲಕ್ಷ್ಮೀ ಕೀ ಆರತಿ, ಜೋ ಕೊಯೀ ಜನ್ ಗಾತಾ,

ಉರ್ ಆನಂದ ಸಮಾತಾ, ಉರ್ ಆನಂದ ಸಮಾತಾ,

ಪಾಪ್ ಉತರ್ ಜಾತಾ, ಓಂ ಜೈ ಲಕ್ಷ್ಮೀ ಮಾತಾ.

## ಶ್ರೀ ಸರಸ್ವತಿ ಜೀ ಕೀ ಆರತಿ

ಆರತಿ ಕೀ ಜೆ ಸರಸ್ವತಿ ಜೀ ಕೀ, ಜನನಿ ವಿದ್ಯಾ ಬುದ್ಧಿ ಭಕ್ತೀ ಕೀ.

ಜಾಕೀ ಕೃಪಾ ಕುಮತಿ ಮಿಟ್ ಜಾಯೇ, ಸುಮಿರನ್ ಕರತ ಸುಮತಿ ಗತಿ ಆಯೇ,

ಶುಕ ಸನಕಾದಿಕ ಜಾಸು ಗುಣ ಗಾಯೇ, ವಾಣಿ ರೂಪ ಅನಾದಿ ಶಕ್ತೀ ಕೀ.

ಆರತಿ ಕೀ ಜೆ ಸರಸ್ವತಿ ಜೀ ಕೀ, ಜನನಿ ವಿದ್ಯಾ ಬುದ್ಧಿ ಭಕ್ತೀ ಕೀ.

ನಾಮ ಜಪತ ಭ್ರಮ್ ಛೂಟೆ ಹಿಯ ಕೆ, ದಿವ್ಯ ದೃಷ್ಟಿ ಶಿಶು ಖುಲೆ ಹಿಯ ಕೆ,

ಮಿಲಹಿ ದರ್ಶ ಪಾವನ ಸಿಯಪಿಯ ಕೆ, ಉಡಾಈ ಸುರಭಿ ಯುಗ ಯುಗ ಕೀರ್ತಿ ಕೀ.

ಆರತಿ ಕೀ ಜೆ ಸರಸ್ವತಿ ಜೀ ಕೀ, ಜನನಿ ವಿದ್ಯಾ ಬುದ್ಧಿ ಭಕ್ತೀ ಕೀ.

ರಚಿತ ಜಾಸು ಬಲ ವೇದ ಪುರಾಣಾ, ಜೇತೇ ಗ್ರಂಥ ರಚಿತ ಜಗನಾನಾ,

ತಾಲು ಛಂದ ಸ್ವರ್ ಮಿಶ್ರಿತ ಗಾನಾ, ಜೋ ಆಧಾರ ಕವಿ ಯತಿ ಸತಿ ಕೀ.

ಆರತಿ ಕೀ ಜೆ ಸರಸ್ವತಿ ಜೀ ಕೀ, ಜನನಿ ವಿದ್ಯಾ ಬುದ್ಧಿ ಭಕ್ತೀ ಕೀ.

ಸರಸ್ವತೀ ಕೀ ವೀಣಾ ವಾಣೀ ಕಲಾ ಜನನಿ ಕೀ,

ಆರತಿ ಕೀ ಜೆ ಸರಸ್ವತಿ ಜೀ ಕೀ, ಜನನಿ ವಿದ್ಯಾ ಬುದ್ಧಿ ಭಕ್ತೀ ಕೀ.

# ಶ್ರೀ ದೇವ್ಯಪರಾಧ ಕ್ಷಮಾಪಣ ಸ್ತೋತ್ರಂ

ನ ಮಂತ್ರಂ ನೋ ಯಂತ್ರಂ ತದಪಿ ಚ ನ ಜಾನೇ ಸ್ತುತಿ ಮಹೋ
ನ ಚಾಹ್ವಾನಂ ಧ್ಯಾನಂ ತದಪಿ ಚ ನ ಜಾನೇ ಸ್ತುತಿ ಕಥಾಃ
ನ ಜಾನೇ ಮುದ್ರಾಸ್ತೇ ತದಪಿ ಚ ನ ಜಾನೇ ವಿಲಪನಂ
ಪರಂ ಜಾನೇ ಮಾತಸ್ತ್ವದನುಸರಣಂ ಕ್ಲೇಶಹರಣಮ್ ॥ ೧ ॥
ವಿಧೇರಜ್ಞಾನೇನ ದ್ರವಿಣ ವಿರಹೇಣಾಲಸತಯಾ
ವಿಧೇಯಾ ಶಕ್ಯತ್ವಾತ್ತವ ಚರಣಯೋರ್ಯಾಚ್ಯುತಿರಭೂತ್
ತದೇತತ್ ಕ್ಷಂತವ್ಯಂ ಜನನಿ ಸಕಲೋದ್ಧಾರಿಣಿ ಶಿವೇ
ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ॥ ೨ ॥
ಪೃಥಿವ್ಯಾಂ ಪುತ್ರಾಸ್ತೇ ಜನನಿ ಬಹವಃ ಸಂತಿ ಸರಳಾಃ
ಪರಂ ತೇಷಾಂ ಮಧ್ಯೇ ವಿರಲ ವಿರಲೋಽಹಂ ತವ ಸುತಃ
ಮದೀಯೋಽಯಂ ತ್ಯಾಗಃ ಸಮುಚಿತ ಮಿದಂ ನೋ ತವ ಶಿವೇ
ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ॥ ೩ ॥
ಜಗನ್ಮಾತರ್ಮಾತಸ್ತವ ಚರಣ ಸೇವಾ ನ ರಚಿತಾ
ನ ವಾ ದತ್ತಂ ದೇವಿ ದ್ರವಿಣಮಪಿ ಭೂಯಸ್ತವ ಮಯಾ
ತಥಾಪಿ ತ್ವಂ ಸ್ನೇಹಂ ಮಯಿ ನಿರುಪಮಂ ಯತ್ಪ್ರಕುರುಷೇ
ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ॥ ೪ ॥
ಪರಿತ್ಯಕ್ತಾ ದೇವಾ ವಿವಿಧ ವಿಧ ಸೇವಾಕುಲತಯಾ
ಮಯಾ ಪಂಚಾಶೀತೇರಧಿಕ ಮಪನೀತೇ ತು ವಯಸಿ
ಇದಾನೀಂ ಚೇನ್ಮಾತಸ್ತವ ಯದಿ ಕೃಪಾ ನಾಽಪಿ ಭವಿತಾ
ನಿರಾಲಂಬೋ ಲಂಬೋದರಜನನಿ ಕಂ ಯಾಮಿ ಶರಣಮ್ ॥ ೫ ॥
ಶ್ವಪಾಕೋ ಜಲ್ಪಾಕೋ ಭವತಿ ಮಧುಪಾಕೋಪಮಗಿರಾ
ನಿರಾಂತಂಕೋರಂಕೋ ವಿಹರತಿ ಚಿರಂ ಕೋಟಿಕನಕ್ಕೈಃ
ತವಾಪರ್ಣೇ ಕರ್ಣೇ ವಿಶತಿ ಮನು ವರ್ಣೇ ಫಲಮಿದಂ
ಜನಃ ಕೋ ಜಾನೀತೇ ಜನನಿ ಜಪನೀಯಂ ಜಪ ವಿಧೌ ॥ ೬ ॥

ಚಿತಾಭಸ್ಮಾಲೇಪೋ ಗರಳಮಶನಂ ದಿಕ್ಪಟಧರೋ
ಜಟಾಧಾರೀ ಕಂಠೇ ಭುಜಗಪತಿಹಾರೀ ಪಶುಪತಿಃ
ಕಪಾಲೀ ಭೂತೇಶೋ ಭಜತಿ ಜಗದೀಶೈಕಪದವೀಂ
ಭವಾನೀ ತ್ವತ್ಪಾಣಿಗ್ರಹಣ ಪರಿಪಾಟೀಫಲಮಿದಮ್ ॥ ೭ ॥
ನ ಮೋಕ್ಷಾಸ್ಯಾಕಾಂಕ್ಷಾ ನ ಚ ವಿಭವವಾಂಛಾಪಿ ಚ ನ ಮೇ
ನ ವಿಜ್ಞಾನಾಪೇಕ್ಷಾ ಶಶಿಮುಖಿ! ಸುಖೇಚ್ಛಾಪಿ ನ ಪುನಃ
ಅತ ಸ್ತ್ವಾಂ ಸಂಯಾಚೇ ಜನನಿ ಜನನಂ ಯಾತು ಮಮ ವೈ
ಮೃಡಾನೀ ರುದ್ರಾಣೀ ಶಿವ ಶಿವ ಭವಾನೀತಿ ಜಪತಃ ॥ ೮ ॥
ನಾರಾಧಿತಾಸಿ ವಿಧಿನಾ ವಿವಿಧೋಪಚಾರೈಃ ।
ಕಿಂ ಸೂಕ್ಷ್ಮಚಿಂತನಪರೈರ್ನ ಕೃತಂ ವಚೋಭಿಃ ॥
ಶ್ಯಾಮೇ! ತ್ವಮೇವ ಯದಿ ಕಿಂಚನ ಮಯ್ಯನಾಥೇ ।
ಧತ್ಸೇ ಕೃಪಾಮುಚಿತಮಂಬ ಪರಂ ತವೈವ ॥ ೯ ॥
ಆಪತ್ಸುಮಗ್ನಸ್ಸ್ಮರಣಂ ತ್ವದೀಯಂ । ಕರೋಮಿ ದುರ್ಗೇ ಕರುಣಾರ್ಣವೇ ಶಿವೇ ।
ನೈತಚ್ಛಠತ್ವಂ ಮಮ ಭಾವಯೇಥಾಃ । ಕ್ಷುಧಾತೃಷಾರ್ತಾ ಜನನೀಂ ಸ್ಮರಂತಿ ॥ ೧೦ ॥
ಜಗದಂಬ ವಿಚಿತ್ರ ಮತ್ರ ಕಿಂ ಪರಿಪೂರ್ಣಾ ಕರುಣಾಸ್ತಿ ಚೇನ್ಮಯಿ ।
ಅಪರಾಧಪರಂಪರಾವೃತಂ ನ ಹಿ ಮಾತಾ ಸಮುಪೇಕ್ಷತೇ ಸುತಮ್ ॥ ೧೧ ॥
ಮತ್ಸಮಃ ಪಾತಕೀ ನಾಸ್ತಿ ಪಾಪಘ್ನೀ ತ್ವತ್ಸಮಾ ನ ಹಿ ।
ಏವಂ ಜ್ಞಾತ್ವಾ ಮಹಾದೇವೀ ಯಥಾ ಯೋಗ್ಯಂ ತಥಾ ಕುರು ॥ ೧೨ ॥
ಇತಿ ಶ್ರೀಮಚ್ಛಂಕರಾಚಾರ್ಯ ವಿರಚಿತಂ ದೇವ್ಯಪರಾಧಕ್ಷಮಾಪಣ ಸ್ತೋತ್ರಮ್ ॥

ಅರ್ಚಕರು ನೀಡಿದ ಮಂಗಳಾರತಿಯನ್ನು ಕಣ್ಣಿಗೊತ್ತಿಕೊಂಡು, ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ, ಜ್ಞಾನ ಮತ್ತು ವಿವೇಕದ ರೂಪದಲ್ಲಿ ಬಂದು ನಮ್ಮೊಳಗಿನ ದುಷ್ಟತನವನ್ನು ನಾಶಮಾಡಿ, ಸುಬುದ್ಧಿ, ಮಂಗಳಪ್ರದವಾದ ಧರ್ಮ ಬುದ್ಧಿಯನ್ನು ಅನುಗ್ರಹಿಸಿ, ಸುಮೇಧನ ಮಾರ್ಗದರ್ಶನದಲ್ಲಿ ಸುರಥ ಮತ್ತು ಸಮಾಧಿಯರಿಂದ ಅಭಿಸ್ತುತ್ಯಳಾಗಿ ಅವರಿಬ್ಬರಿಗೂ ಅವರವರ ಆಶಾನುಗುಣ ವರಗಳನ್ನಿತ್ತಂತೆ, ನಮ್ಮಿಂದ ಆರಾಧಿತಳಾಗಿ ನಮಗೂ ಭೋಗ ಸ್ವರ್ಗ ಅಪವರ್ಗ ಪ್ರದಾನ ಮಾಡಲಿ.

**ಶೂಲೇನ ಪಾಹಿ ನೋ ದೇವಿ ಪಾಹಿ ಖಡ್ಗೇನಚಾಂಬಿಕೇ ।**
**ಘಂಟಾಸ್ವನೇನ ನಃ ಪಾಹಿ ಚಾಪಜ್ಯಾನಿಸ್ಸ್ವನೇನ ಚ ।।**
**ಪ್ರಾಚ್ಯಾಂ ರಕ್ಷ ಪ್ರತೀಚ್ಯಾಂ ಚ ಚಂಡಿಕೇ ರಕ್ಷ ದಕ್ಷಿಣೇ ।**

ಭ್ರಾಮಣೇನಾತ್ಮಶೂಲಸ್ಯ ಉತ್ತರಸ್ಯಾಂ ತಥೇಶ್ವರಿ ॥

ನಮ್ಮನ್ನು ಸರ್ವದಾ ಸಂರಕ್ಷಣೆ ಮಾಡೆಂದು ಬೇಡುತ್ತಾ,

ನಮಸ್ತೇ ರುದ್ರ ರೂಪಿಣ್ಯೈ ನಮಸ್ತೇ ಮಧುಮರ್ದಿನಿ ।

ನಮಃ ಕೈಟಭಹಾರಿಣ್ಯೈ ನಮಸ್ತೇ ಮಹಿಷಾರ್ದಿನಿ ।

ಚಾಮುಂಡೇ ಚಂಡಘಾತೀ ಚ ಐಂಕಾರೀ ವರದಾಯಿನೀ ।

ನಮಸ್ತೇ ಶುಂಭಹಂತ್ರ್ಯೈ ಚ ನಿಶುಂಭಾಸುರ ಘಾತಿನಿ ।

ಐಂಕಾರೀ ಸೃಷ್ಟಿರೂಪಾಯ್ಯೈ ಹ್ರೀಂಕಾರೀ ಪ್ರತಿಪಾಲಿಕಾ ।

ಕ್ಲೀಂಕಾರೀ ಕಾಮರೂಪಿಣ್ಯೈ ಬೀಜರೂಪೇ ನಮೋಸ್ತುತೇ ॥

ಧಾಂ ಧೀಂ ಧೂಂ ಧೂರ್ಜಟೇಃಪತ್ನೀ ವಾಂ ವೀಂ ವೂಂ ವಾಗಧೀಶ್ವರೀ ।

ಕ್ರಾಂ ಕ್ರೀಂ ಕ್ರೂಂ ಕಾಲಿಕಾದೇವಿ, ಶಾಂ ಶೀಂ ಶೂಂ ಮೇ ಶುಭಂ ಕುರು ॥

ಹುಂ ಹುಂ ಹುಂಕಾರ ರೂಪಿಣ್ಯೈ ಜಂ ಜಂ ಜಂ ಜಂಭನಾದಿನೀ ।

ಭ್ರಾಂ ಭ್ರೀಂ ಭ್ರೂಂ ಭೈರವೀ ಭದ್ರೇ ಭವಾನ್ಯೈ ತೇ ನಮೋ ನಮಃ ।

ಓಂ ಐಂ ಮಹಾಕಾಳ್ಯೈ ನಮಃ ।

ಓಂ ಹ್ರೀಂ ಮಹಾಲಕ್ಷ್ಮ್ಯೈ ನಮಃ ।

ಓಂ ಕ್ಲೀಂ ಮಹಾಸರಸ್ವತ್ಯೈ ನಮಃ ।

ಓಂ ಐಂ ಹ್ರೀಂ ಕ್ಲೀಂ ಮಹಾದೇವ್ಯೈ ನಮೋ ನಮಃ ।

ಪಾಹಿಮಾಂ ಪಾಹಿಮಾಂ ಪಾಹಿಮಾಂ ದೇವಿ, ತುಭ್ಯಂ ನಮೋ ದೇವಿ,

ತುಭ್ಯಂ ನಮೋ ದೇವಿ, ತುಭ್ಯಂ ನಮೋ ನಮಃ ॥

॥ ಶ್ರೀ ಜಗದಂಬಾರ್ಪಣಮಸ್ತು ॥

